




ತಯಾರಿಸುವ ಕೇಕುಗಳಿಗೆ ಮೊಟ್ಟೆಯ ಬಳಕೆ ಇಲ್ಲ. ರುಚಿಯಲ್ಲಿ ಯಾವುದೇ ವ್ಯತ್ಯಾಸ ಬರುವುದಿಲ್ಲ.

"ಈಗೀಗ ಎಲ್ಲರೂ ಮೊಟ್ಟೆ ರಹಿತ ಕೇಕುಗಳನ್ನೇ ಕೇಳುತ್ತಾರೆ. ಕೇಕ್ ಅನ್ನು ತಯಾರಿಸುವಾಗ ಮೊಟ್ಟೆ, ಮೊಸರು, ಹಾಲು, ಬೆಣ್ಣೆ, ಮಜ್ಜಿಗೆ, ಎಣ್ಣೆ ಬಳಸಬಹುದು ಅಥವಾ ಇವ್ಯಾವುದನ್ನೂ ಬಳಸದೆಯೂ ಮಾಡಬಹುದು. ಒಂದು ರೆಸಿಪಿಯನ್ನು ಹಲವಾರು ಬಾರಿ ಅಭ್ಯಾಸ ಮಾಡಿದರೆ ಚೆನ್ನಾಗಿ ಬರುತ್ತದೆ' ಎನ್ನುತ್ತಾರೆ ಅನುಷಾ.

ಇವರು ಕೇಕಿನಲ್ಲಿ ವಿಶೇಷ ರೀತಿಯ ಆಕರ್ಷಕ ಮಾದರಿಗಳನ್ನು ತಯಾರಿಸುತ್ತಾರೆ. ಚಿಕ್ಕ ಮಕ್ಕಳು ಇಷ್ಟಪಡುವ ಮಿಕ್ಕಿಮೌಸ್, ಬಾರ್ಬಿ ಡಾಲ್, ಕಾರ್ ಮಾದರಿ ಇತ್ಯಾದಿ. ಆಶ್ಚರ್ಯದ ಸಂಗತಿಯೆಂದರೆ ಕೇಕಿನ ಅಲಂಕಾರಕ್ಕೆ ಯಾವ ಅಚ್ಚಿನ ಬಳಕೆ ಮಾಡುವುದಿಲ್ಲ. ಎಲ್ಲವನ್ನೂ ಕಟ್‌ಪೀಸ್ ಮಾಡಿ ಕೂಡಿಸುತ್ತಾರೆ. ಇದಕ್ಕೆ ಬಹಳ ನಾಜೂಕು ಕೌಶಲ್ಯ ಬೇಕು.  ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಕೇಕಿನಲ್ಲಿ ಕೃತಕ ಬಣ್ಣಗಳ ಬಳಕೆ ಬೇಡ ಎನ್ನುವವರಿಗೆ ಬೀಟ್ ರೂಟ್, ಕೇಸರಿ ಮುಂತಾದ ಸಹಜ, ಖಾದ್ಯ ಯೋಗ್ಯ ಬಣ್ಣ ಬಳಸಿ ತಯಾರಿಸಿ ಕೊಡುತ್ತಾರೆ. ಇವರು ಹೋದ ವರ್ಷ ಬಹಳ ರುಚಿಯಾಗಿದ್ದ ಗೇರು ಹಣ್ಣಿನ ಕೇಕನ್ನೂ ತಯಾರಿಸಿದ್ದರು. ಇತ್ತೀಚೆಗೆ ನೂರು ಎಮೋಜಿ (ಸ್ಮೈಲಿ) ಐಕಾನ್‌ಗಳ ಕಪ್ ಕೇಕುಗಳನ್ನೂ ತಯಾರಿಸಿದ್ದಾರೆ. ಹಾಂ, ಮಾರುಕಟ್ಟೆಯಲ್ಲಿ ಲಭ್ಯವಿರುವ ಕೇಕ್ ಗಳಿಗಿಂತ ಇವರ ಕೇಕ್‌ಗಳಿಗೆ ಕಡಿಮೆ ಬೆಲೆ ಇದೆ.

ಈ ರೀತಿಯಾಗಿ ಇವರು ಮನೆಯಲ್ಲೇ ಕೇಕ್ ತಯಾರಿಸಿ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವಗಳಿಗೆ ಕೊಡುವುದು ಪ್ರಾರಂಭಿಸಿ ಒಂದು ವರ್ಷವಾಯಿತು.

'ನನಗೆ ಕೇಕ್ ಅಂದ್ರೆ ಇಷ್ಟ. ನಾನು ಕೇಕ್ ಕಲಿಯಲು ಇದೂ ಒಂದು ಕಾರಣ' ಎಂದು ನಗುತ್ತಾರೆ ಜೋಶಿ. ಇದಕ್ಕಿಂತ ಮೊದಲು ಕೇಕ್ ತರಬೇತಿ ತರಗತಿಗಳನ್ನು ಪ್ರಾರಂಭಿಸಲು ಯೋಚಿಸಿದ್ದರು. ಇದಕ್ಕಾಗಿ 4 5 ರೆಸಿಪಿ, 700 ರೂ ಫೀಸ್ ನಿಗದಿ ಮಾಡಿದ್ದರು. ಕ್ಲಾಸ್ ಮಾಡಿ ಅಂತ ಕೇಳಿದವರು ಯಾರೂ ಬರಲಿಲ್ಲ! ಇದರಿಂದ ಬೇಸರಗೊಂಡರೂ ಮನೆಯಲ್ಲಿ ತಯಾರಿಸಿ ಕೊಡುವ ಯೋಚನೆಯನ್ನು ಮುಂದುವರೆಸಿದರು. ಇದಕ್ಕೆ ಅತ್ತೆಮಾವಂದಿರ ಪ್ರೋತ್ಸಾಹವೂ ಇತ್ತು. ಮೊದಲು ಮೂರುನಾಲ್ಕು ಮಾರಾಟವಾಗಿ ಗ್ರಾಹಕರಿಂದ ಒಳ್ಳೆಯ ಪ್ರತಿಕ್ರಿಯೆ ಬಂದಾಗ ಇವರಿಗೆ ಮಾಡಬಲ್ಲನೆಂಬ ಆತ್ಮವಿಶ್ವಾಸವೂ ಹೆಚ್ಚಿತು.

ವಾಟ್ಸಾಪ್‌ನಲ್ಲಿ ಇವರದೇ ಗುಂಪೊಂದನ್ನು ತೆರೆದಿದ್ದಾರೆ. ಹಾಗೆಯೇ ಫೇಸ್‌ಬುಕ್‌ನಲ್ಲಿ ಇವರ ಪೇಜ್ ಕೂಡಾ ಇದೆ (ಎವಿ ಬೇಕ್ಸ್ ಆಂಡ್ ಕೇಕ್ಸ್). ಇಲ್ಲಿ ಅವರು ತಯಾರಿಸಿದ ಕೇಕ್‌ಗಳ ಫೋಟೋ ಹಾಗೂ ವಿಧಾನಗಳನ್ನು ಅಪ್ಲೋಡ್ ಮಾಡುತ್ತಾರೆ. ಪೂರೈಸುವುದೇ ಕಷ್ಟ, ಅಷ್ಟು ಬೇಡಿಕೆ ಬರುತ್ತಿದೆ. ಹಾಗಾಗಿಯೇ ಮನೆಯಲ್ಲೊಂದು ಔಟ್‌ಲೆಟ್ ತೆರೆಯುವ ಆಲೋಚನೆಯಿದೆ ಅನುಷಾರಿಗೆ.

ಇವರು ಮನೆಯಲ್ಲಿಯೇ ಇದ್ದು ಏನನ್ನಾದರೂ ಮಾಡಬೇಕೆನ್ನುವ ಮಹಿಳೆಯರಿಗೆ ಸ್ಫೂರ್ತಿಯಾಗಿ ನಿಲ್ಲುತ್ತಾರೆ. ಅದು ಇಲ್ಲ, ಇದು ಇಲ್ಲ, ಇದರ ಬಗ್ಗೆ ಮಾಹಿತಿ ಇಲ್ಲ, ಸಲಕರಣೆ ಇಲ್ಲ ಎನ್ನುವ ದೂರಿಗೆಲ್ಲಾ ಹೊರತಾಗಿದ್ದಾರೆ ಅನುಷಾ. ಮಕ್ಕಳಿನ್ನೂ ಚಿಕ್ಕವರು, ಇವರ ಕೇಕ್ ತಯಾರಿಕೆಗೆ ಮನೆಯವರ ಸಹಕಾರ ಚೆನ್ನಾಗಿದೆ. ಪೇಂಟಿಂಗ್, ಗಾಯನ ಮತ್ತು ಇನ್ನಿತರ ಅಡುಗೆ ಮಾಡುವುದರಲ್ಲಿ ಇವರಿಗೆ ಅತೀವ ಆಸಕ್ತಿ. ಇರುವ ಸಮಯದಲ್ಲೇ ಇವನ್ನೆಲ್ಲ ಮಾಡಲು ಸಾಧ್ಯ ಎನ್ನುವ ಅಭಿಪ್ರಾಯ ಇವರದು.

ಇವು ಮೊಟ್ಟೆರಹಿತ ಕೇಕುಗಳೆಂದರೆ ನಂಬಲಸಾಧ್ಯ ನಾವು ಮನೆಯಲ್ಲಿ ಮಾಡಿದರೆ ಇಷ್ಟು ಚೆನ್ನಾಗಿ ಬರುವುದೇ ಇಲ್ಲ ಎನ್ನುವುದು ಇವರ ಕೇಕುಗಳ ರುಚಿ ನೋಡಿದ ಗ್ರಾಹಕರ ಪ್ರತಿಕ್ರಿಯೆ. ಅದಕ್ಕೆ ಇವರು ಹೇಳುವುದು ಕೇಕ್ ತಯಾರಿಸಲು ಸಾಕಷ್ಟು ಅಭ್ಯಾಸ ಮಾಡಲೇಬೇಕು.

**ಅನುಷಾ ಜೋಶಿ ಸಂಪರ್ಕ: 9538462976**